1. "ನಮ್ಮ ಜೀವನದಿಂದ ಬೆಳಕು ಹೊರಟು ಹೋಗಿದೆ ಮತ್ತು ಎಲ್ಲೆಲ್ಲೂ ಕತ್ತಲಿದೆ". ನೆಹರೂರವರ ಈ ಮಾತುಗಳು ಯಾರ ಮರಣಕ್ಕೆ ಸಂಬಂಧಿಸಿದೆ ?
   A) ಚಂದ್ರಶೇಖರ್ ಆಜ಼ಾದ್ B) ಸುಭಾಷ್‌ಚಂದ್ರ ಬೋಸ್
   C) ಸುಖ್‌ದೇವ್ D) ಮಹಾತ್ಮ ಗಾಂಧಿ

2. ಯಾವ ವರ್ಷದಲ್ಲಿ ಕರೈಕಲ್‌ನ್ನು ಫ್ರೆಂಚ್ ಆಕ್ರಮಣ ಆಂಟಿಗೋನ್ ಇಂಡಿಯನ್ ಒಕ್ಕೂಟಕ್ಕೆ ಸೇರಿಸಲಾಯಿತು ?
   A) 1950 B) 1947 C) 1954 D) 1948

3. ಯಾರ ಅಧ್ಯಕ್ಷತೆಯಲ್ಲಿ ಮಲಬಾರ್ ಜಿಲ್ಲೆ ಕಾಂಗ್ರೆಸ್‌ನ ಪ್ರಥಮ ಅಧಿವೇಶನವು ಪಾಲಕ್ಕಾಡ್‌ನಲ್ಲಿ ನಡೆಸಲ್ಪಟ್ಟಿತು ?
   A) ಕೆ.ಪಿ. ಕೇಶವ ಮೆನನ್ B) ಕೆ. ಮಾಧವನ್ ನಾಯರ್
   C) ಅನ್ನಿಬೆಸಂಟ್ D) ಕೆ.ಪಿ. ರಾಮನ್ ಮೆನನ್

4. ಅಕ್ಬರನ ಕಾಲದಲ್ಲಿ, ಮಹಾಭಾರತ ಕಥೆಯು ಸಂಪೂರ್ಣವಾಗಿ ಚಿತ್ರರೂಪದಲ್ಲಿ ಸಿದ್ಧಪಡಿಸಲ್ಪಟ್ಟಿತು
   A) ಕಾರ್ಖಾನ B) ರಝ್ಮಾಂನಾಮ C) ದಿನ್-ಇ ಇಲಾಹಿ D) ದರ್ಬಾರಿ

5. ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಾದೇಶಿಕ ಆಡಳಿತ
   A) ನಾಯಂಗರ್ B) ಅಯ್ಯಂಗಾರ್ C) ನಾಯಕ್ D) ಸ್ವರಾಜ್ಯ

6. ಮಳೆಗಾಲದ ಪ್ರಾರಂಭದಲ್ಲಿ ಅಥವಾ ಕೊನೆಯಲ್ಲಿ ಅರೇಬಿಯನ್ ಸಮುದ್ರದಲ್ಲಿ ಸಂಭವಿಸುವ ಒಂದು ವಿದ್ಯಮಾನ
   A) ವವ್ವೇಳಿ B) ಕಡಲಾಕ್ರಮಣಂ C) ಚಾಕರಾ D) ಸಪ್ತಮಿವೇಳಿ

7. ಶುಭ್ರ ದಿನವೊಂದರಂದು ಎತ್ತರ ಪ್ರದೇಶಗಳಲ್ಲಿ ತೆಳು ಗರಿಗಳ ಕಟ್ಟುಗಳಂತೆ ಕಂಡುಬರುವ ಒಂದು ಮೇಘ ರೂಪ
   A) ಸಿರಸ್ B) ಸ್ಟ್ರೇಟಸ್ C) ಕ್ಯೂಮುಲಸ್ D) ನಿಂಬಸ್

8. ಆಲ್ಪ್ಸ್‌ನಾದ್ಯಂತ ಮತ್ತು ಉತ್ತರದ ಕೆಳಗೆ ತಪ್ಪಲಿನಲ್ಲಿ ಬೀಸುತ್ತಿರುವ ಪ್ರಾದೇಶಿಕ ಗಾಳಿ
   A) ಚಿನೂಕ್ B) ಹ್ಯಾರ್‌ಮಟನ್ C) ಫಹ್ನ್ D) ಲೂ

9. ಇಂಪೀರಿಯಲ್ ನಕ್ಷೆ ಸಂಖ್ಯೆ $45\frac{D}{10}$ ರಲ್ಲಿ D ಏನನ್ನು ಸೂಚಿಸುತ್ತದೆ ?
   A) ಮಿಲಿಯನ್ ಶೀಟ್ B) ಡಿಗ್ರಿ ಶೀಟ್
   C) ಮಿನುಟ್ (Minute) D) ಕೊಂಟೋರ್ ರೇಖೆ

10. ಉತ್ತರ ಪ್ರದೇಶದ ಬೃಹತ್ ಅಣು ವಿದ್ಯುತ್ ಸ್ಥಾವರ
    A) ತಾರಾಪುರ್ B) ಕಲ್ಪಕ್ಕಮ್ C) ಕೈಗಾ D) ನರೋರ

11. ಅಟಾರ್ನಿ ಜನರಲ್‌ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಅಸತ್ಯವಾಗಿದೆ/ವಾಗಿವೆ ?
    1. ಅವರು ಭಾರತದ ಪ್ರಥಮ ಕಾನೂನು ಅಧಿಕಾರಿಯಾಗಿದ್ದಾರೆ.
    2. ಸಂಸತ್ತಿನ ಸದಸ್ಯನಾಗಿಲ್ಲವಾದರೂ, ಅವರು ಸಂಸತ್ತಿನಲ್ಲಿ ಭಾಗವಹಿಸಬಹುದು.
    3. ಅಟಾರ್ನಿ ಜನರಲ್ ರಾಷ್ಟ್ರಾಧ್ಯಕ್ಷರಿಂದ ನೇಮಿಸಲ್ಪಡುತ್ತಾರೆ.
    4. ಸಂಸತ್ತಿನ ಸದಸ್ಯನಾಗಿರದೆ ಇರುವುದರಿಂದ ಅವರಿಗೆ ಸಂಸತ್ತಿನಲ್ಲಿ ಭಾಗವಹಿಸುವ ಹಕ್ಕು ಇರುವುದಿಲ್ಲ.

    A) 2 ಮಾತ್ರ B) 4 ಮಾತ್ರ C) 1 ಮತ್ತು 2 D) 3 ಮತ್ತು 4

12. ಭಾರತದ ಪ್ರಧಾನ ಚುನಾವಣಾ ಆಯುಕ್ತರು ಯಾರು ?

    A) ಸುಶೀಲ್ ಚಂದ್ರ B) ನವೀನ್ ಚಾವ್ಲಾ C) ರಾಜೀವ್ ಕುಮಾರ್ D) ಅಲೋಕ್ ವರ್ಮ

13. "ನೀವು ಹೇಳುವುದನ್ನು ನಾನು ಒಪ್ಪುವುದಿಲ್ಲ, ಆದರೆ ಅದನ್ನು ಹೇಳುವ ನಿಮ್ಮ ಹಕ್ಕನ್ನು ನಾನು ಸಾವಿನವರೆಗೂ ಗೌರವಿಸುತ್ತೇನೆ." ಇದು ಯಾರ ಮಾತು ?

    A) ವಾಲ್‌ಟಯರ್ B) ಗಾಂಧಿ C) ನೆಹರೂ D) ಭಗತ್‌ಸಿಂಗ್

14. ಕೆಳಗಿನವುಗಳಲ್ಲಿ ಸರಿಯಾದ ಹಣಕಾಸು ಬಿಲ್‌ಗೆ ಸಂಬಂಧಿಸಿದ ಹೇಳಿಕೆ/ಹೇಳಿಕೆಗಳು ಯಾವುವು ?
    1. ರಾಜ್ಯಸಭೆ ಹೆಚ್ಚು ಅಧಿಕಾರ ಹೊಂದಿರುತ್ತದೆ.
    2. ಲೋಕಸಭೆಯು ಹೆಚ್ಚು ಅಧಿಕಾರ ಹೊಂದಿರುತ್ತದೆ.
    3. ಎರಡೂ ಸಭೆಗಳಿಗೆ ಸಮಾನ ಅಧಿಕಾರವಿದೆ.
    4. ಹಣಕಾಸು ಬಿಲ್ಲಿನ ಮೇಲೆ ಲೋಕಸಭೆಯ ಸ್ಪೀಕರ್‌ಗೆ ಅಂತಿಮ ಅಧಿಕಾರವಿದೆ.

    A) 1 B) 2 C) 1 ಮತ್ತು 3 D) 2 ಮತ್ತು 4

15. COPRAದ ಪೂರ್ಣ ರೂಪವೇನು ?
    1. Council for Protection of Rights of Aged
    2. Covid Protection Area
    3. Consumer Protection Act
    4. Co-operative Plan for Rehabilitation of Abandoned

    A) 1 B) 2 C) 3 D) 4

16. ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ ?
    1. ಸಂವಿಧಾನದ ಭಾಗ 4 ರಲ್ಲಿ ಸೇರಿದೆ.
    2. ಸಂವಿಧಾನದ ಭಾಗ 3 ರಲ್ಲಿ ಸೇರಿದೆ.
    3. ನ್ಯಾಯಾಲಯ ಕಲಾಪಗಳಿಂದ ಸಾಧಿಸಬಹುದಾಗಿದೆ.
    4. ಬ್ರಿಟಿಷ್ ಸಂವಿಧಾನದಿಂದ ಎರವಲು ಪಡೆದುದಾಗಿದೆ.

    A) 1 B) 4 C) 1 ಮತ್ತು 4 D) 2 ಮತ್ತು 3

17. ಕೌಟುಂಬಿಕ ಹಿಂಸೆ ನಿಷೇಧ ಕಾಯಿದೆಯು ಯಾವ ವರ್ಷದಲ್ಲಿ ಅಂಗೀಕೃತವಾಯಿತು ?

A) 2005 B) 2010 C) 2003 D) 2007

18. ಸಂವಿಧಾನ ಮಂಡಲಿಗೆ ಸಂಬಂಧಿಸಿದಂತೆ ಯಾವ ಹೇಳಿಕೆಯು/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ ?

1. ಕ್ಯಾಬಿನೆಟ್ ಮಿಶನ್ ಪದ್ಧತಿ ಪ್ರಕಾರ ರೂಪುಗೊಂಡಿತು.
2. 3 ಮಲಯಾಳಿ ಸ್ತ್ರೀಯರು ಭಾಗವಹಿಸಿದರು.
3. ಡಾ. ರಾಜೇಂದ್ರ ಪ್ರಸಾದ್ ಕರಡು ಸಮಿತಿಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.
4. ಕೆ.ಎಂ. ಮುನ್ಶಿಯವರು ಕರಡು ಸಮಿತಿಯ ಒಬ್ಬ ಸದಸ್ಯರಾಗಿದ್ದರು.

A) 1, 2, 3, 4 B) 1, 2, 4 C) 3, 2 D) 1, 2, 3

19. ಮಾಹಿತಿ ಹಕ್ಕು ಕಾಯಿದೆಗೆ ಸಂಬಂಧಿಸಿದಂತೆ ಕೆಳಗಿನ ವಾಕ್ಯಗಳಲ್ಲಿ ಯಾವುದು ಸರಿಯಾಗಿದೆ/ಸರಿಯಾಗಿವೆ ?

1. ಮಾಹಿತಿ ಹಕ್ಕು ಕಾಯಿದೆಯನ್ನು ಅಂಗೀಕರಿಸುವಲ್ಲಿ MKSS ಸಂಘಟನೆಯು ಪ್ರಮುಖ ಪಾತ್ರವಹಿಸಿತು.
2. ರಾಷ್ಟ್ರಾಧ್ಯಕ್ಷ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಮ್‌ರವರು ಮಾಹಿತಿ ಹಕ್ಕು ಕಾಯಿದೆಗೆ ಸಹಿ ಮಾಡಿದರು.
3. MKSS ಸಂಘಟನೆಯ ಕಾರ್ಯಾಚರಣೆ ಕ್ಷೇತ್ರವು ರಾಜಸ್ಥಾನವಾಗಿತ್ತು.
4. ಈ ಕಾಯಿದೆಯನ್ನು 2008 ರಲ್ಲಿ ಅಂಗೀಕರಿಸಲಾಯಿತು.

A) 1, 2, 3, 4 B) 1, 3, 4 C) 1, 2, 3 D) 1, 2, 4

20. ಯಾವ ಸಮಿತಿಯು ಸ್ಥಾನೀಯ ಸರಕಾರಗಳಿಗೆ ಸಾಂವಿಧಾನಿಕ ಸ್ಥಾನಮಾನವನ್ನು ಪ್ರಸ್ತಾಪಿಸಿತು ?

1. ಪಿ.ಕೆ. ತುಂಗನ್ ಕಮಿಟಿ
2. ಬಲವಂತ್‌ರಾಯ್ ಕಮಿಟಿ
3. ಸರ್ಕಾರಿಯಾ ಕಮಿಷನ್
4. ಹನುಮಂತರಾವ್ ಕಮಿಟಿ

A) 1 B) 2 C) 3 D) 4

21. ಯಾವ ಸ್ವತಂತ್ರ ಪ್ರಾಧಿಕಾರವು ಭಾರತದಲ್ಲಿ ವಿತ್ತೀಯ ನೀತಿಯನ್ನು ಜಾರಿಗೊಳಿಸುತ್ತದೆ ?

A) ಹಣಕಾಸು ಸಚಿವಾಲಯ B) ಸರಕಾರ
C) ಭಾರತೀಯ ರಿಸರ್ವ್ ಬ್ಯಾಂಕ್ D) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

22. ಕೊರತೆ ಬಜೆಟ್ ಎಂದರೇನು ?

A) ಆದಾಯ ಮತ್ತು ವೆಚ್ಚವನ್ನು ಸರಿದೂಗಿಸುವ ಬಜೆಟ್
B) ಆದಾಯವನ್ನು ಮೀರಿ ವೆಚ್ಚವಿರುವ ಬಜೆಟ್
C) ವೆಚ್ಚವು ಆದಾಯಕ್ಕಿಂತ ಕಡಿಮೆ ಇರುವ ಬಜೆಟ್
D) ಮೇಲಿನವುಗಳಲ್ಲಿ ಯಾವುದೂ ಅಲ್ಲ

23. GST (ಸರಕುಗಳು ಮತ್ತು ಸೇವಾ ತೆರಿಗೆ) ಯಾವ ನಮೂನೆಯ ತೆರಿಗೆಯಾಗಿರುತ್ತದೆ ?
A) ನೇರ ತೆರಿಗೆ
B) ಪರೋಕ್ಷ ತೆರಿಗೆ
C) ಆದಾಯ ತೆರಿಗೆ
D) ಮೌಲ್ಯವರ್ಧಿತ ತೆರಿಗೆ

24. GDP (ಒಟ್ಟು ದೇಶಿಯ ಉತ್ಪನ್ನ) + NFIA (ವಿದೇಶಿ ನಿವ್ವಳಾಂಶ ಆದಾಯ) = ?
A) ನಿವ್ವಳ ರಾಷ್ಟ್ರೀಯ ಉತ್ಪನ್ನ (NNP)
B) ಒಟ್ಟು ರಾಷ್ಟ್ರೀಯ ಉತ್ಪನ್ನ (GNP)
C) ನಿವ್ವಳ ಪರೋಕ್ಷ ತೆರಿಗೆಗಳು (NITx)
D) ನಿವ್ವಳ ದೇಶೀಯ ಉತ್ಪನ್ನ (NDP)

25. ಯೋಜನಾ ಆಯೋಗದ ಹೊಸ ಹೆಸರೇನು ?
A) ರಾಷ್ಟ್ರೀಯ ಅಭಿವೃದ್ಧಿ ಸಮಿತಿ
B) ಯೋಜನಾ ಆಯೋಗ
C) ನೀತಿ ಆಯೋಗ (NITI Aayog)
D) ಕೇಂದ್ರ ಹಣಕಾಸು ಸಚಿವಾಲಯ

26. AB ರಕ್ತ ನಮೂನೆಯುಳ್ಳ ವ್ಯಕ್ತಿಯೋರ್ವನು A ರಕ್ತ ನಮೂನೆಯ ಇನ್ನೊಂದು ವ್ಯಕ್ತಿಗೆ ರಕ್ತದಾನ ಮಾಡುವಂತಿಲ್ಲ, ಏಕೆಂದರೆ A ರಕ್ತ ನಮೂನೆ ಹೊಂದಿರುವ ವ್ಯಕ್ತಿಯ ಶರೀರವು
A) ಇದರಲ್ಲಿ A ಆ್ಯಂಟಿಜನ್ ಇಲ್ಲದಿರುವಿಕೆ
B) ಆ್ಯಂಟಿ B ಎಂದು ಕರೆಯಲ್ಪಡುವ ಆ್ಯಂಟಿಬಾಡಿಗಳನ್ನು ಇದು ಉತ್ಪನ್ನ ಮಾಡುತ್ತದೆ
C) ಆ್ಯಂಟಿ A ಎಂದು ಕರೆಯಲ್ಪಡುವ ಆ್ಯಂಟಿಬಾಡಿಗಳನ್ನು ಇದು ಉತ್ಪನ್ನ ಮಾಡುತ್ತದೆ
D) ಮೇಲಿನವುಗಳಲ್ಲಿ ಯಾವುದೂ ಅಲ್ಲ

27. ಕೇರಳದ ಪ್ರಥಮ ರಬ್ಬರ್ ಪಾರ್ಕ್ ಇರುವ ಸ್ಥಳ
A) ಕಾಸರಗೋಡು
B) ಕೊಟ್ಟಾಯಂ
C) ಐರಾಪುರಂ
D) ತಿರುವನಂತಪುರಂ

28. ಮೀನುಗಳಲ್ಲಿರುವ ಹೃದಯಕೊಠಡಿಗಳ ಸಂಖ್ಯೆ
A) 3
B) 4
C) 2
D) 1

29. ಭಾರತದಲ್ಲಿ CDRI ಲಕ್ನೋದಿಂದ ತಯಾರಿಸಲ್ಪಡುವ ಮಹಿಳೆಯರಿಗಾಗಿ ಗರ್ಭನಿರೋಧಕಗಳು
A) ಕಾಪರ್ – T
B) ಸಹೇಲಿ
C) LNG20
D) ಮೇಲಿನವುಗಳಲ್ಲಿ ಯಾವುದೂ ಅಲ್ಲ

30. "ಜೀವವೈವಿಧ್ಯ ಹಾಟ್‌ಸ್ಪಾಟ್"ಗಳ ಪರಿಕಲ್ಪನೆಯನ್ನು ರೂಪಿಸಿದ ವಿಜ್ಞಾನಿ
A) ನಾರ್ಮನ್ ಮೇಯರ್
B) ಎಡ್ವರ್ಡ್ ವಿಲ್ಸನ್
C) ಜಿಮ್ ಕಾರ್ಬೆಟ್
D) ಸುಂದರ್‌ಲಾಲ್ ಬಹುಗುಣ

31. ಒಂದು ಗಾಜಿನ ಪಾತ್ರೆಯಲ್ಲಿ ಬಿಸಿ ನೀರನ್ನು ಸುರಿದಾಗ ಅದು ಸಿಡಿಯುವಂತೆ ಮಾಡುತ್ತದೆ. ಏಕೆಂದರೆ
A) ಗಾಜಿನ ಪಾತ್ರೆಯ ಕಡಿಮೆ ಉಷ್ಣವಾಹಕತೆಯಿಂದಾಗಿ
B) ಗಾಜಿನ ಪಾತ್ರೆಯ ಅಧಿಕ ಉಷ್ಣವಾಹಕತೆಯಿಂದಾಗಿ
C) ಗಾಜಿನ ಪಾತ್ರೆಯು ಕಡಿಮೆ ಸಾಪೇಕ್ಷ ಶಾಖವನ್ನು ಹೊಂದಿರುವುದರಿಂದ
D) ಗಾಜಿನ ಪಾತ್ರೆಯ ಸಾಂದ್ರತೆಯು ಕ್ಷಿಪ್ರವಾಗಿ ಹೆಚ್ಚಾಗುತ್ತದೆ

32. ಜಲಜನಕ ರೋಹಿತಕ್ಕೆ, ಯಾವ ವ್ಯಾಪ್ತಿಯು ಗೋಚರ ಬೆಳಕಿನಲ್ಲಿ ತರಂಗಾಂತರ ವ್ಯಾಪ್ತಿಯನ್ನುಂಟು ಮಾಡುತ್ತದೆ ?
A) ಲೈಮನ್ ಶ್ರೇಣಿ
B) ಬಾಲ್ಮರ್ ಶ್ರೇಣಿ
C) ಬ್ರಾಕೆಟ್ ಶ್ರೇಣಿ
D) ಮೇಲಿನವುಗಳಲ್ಲಿ ಯಾವುದೂ ಅಲ್ಲ

33. 30 ಮೀ. ಎತ್ತರದ ಕಟ್ಟಡವೊಂದರಿಂದ 50 ಗ್ರಾಂ ಭಾರದ ಕಲ್ಲೊಂದು ಕೆಳಗೆ ಬೀಳುವಾಗ ಅದರ ಸರಿಸುಮಾರು ವೇಗ ಎಷ್ಟಾಗಿರುತ್ತದೆ ?
A) 30.32 m/s
B) 24.25 m/s
C) 45.54 m/s
D) 60.64 m/s

34. 'ಕ್ಯಾಲಿಯಂ' ಎಂಬುದು ಯಾವ ಧಾತುವಿನ ಲ್ಯಾಟಿನ್ ಹೆಸರಾಗಿದೆ ?
A) ಸೋಡಿಯಂ
B) ತಾಮ್ರ
C) ಪೊಟ್ಯಾಸಿಯಂ
D) ಕಬ್ಬಿಣ (Iron)

35. ಬಿಸಿಮಾಡುವ ಮೂಲಕ ಘನವಸ್ತುಗಳನ್ನು ನೇರವಾಗಿ ಅನಿಲಗಳಾಗಿ ಪರಿವರ್ತಿಸುವ ಪ್ರಕ್ರಿಯೆ ಯಾವುದು ?
A) ಉತ್ಪತನ
B) ಆವಿಯಾಗುವಿಕೆ
C) ನಿಕ್ಷೇಪ
D) ಘನೀಕರಣ

36. ಗುಂಪಿಗೆ ಸೇರದನ್ನು ಕಂಡುಹಿಡಿಯಿರಿ.
A) ರೀಡ್ ಓನ್ಲಿ ಮೆಮೊರಿ
B) ರ್‍ಯಾಂಡಮ್ ಎಕ್ಸೆಸ್ ಮೆಮೊರಿ
C) ಕ್ಯಾಶ್ ಮೆಮೊರಿ
D) ಬ್ಲ್ಯೂರೇ ಡಿ.ವಿ.ಡಿ.

37. ಭಾರತೀಯ ರೈಲ್ವೇಸ್ ಬಳಸುತ್ತಿರುವ ಕಂಪ್ಯೂಟರ್ ಜಾಲತಾಣ ಯಾವುದರ ಒಂದು ಉದಾಹರಣೆಯಾಗಿದೆ ?
A) ಮೆಟ್ರೋಪಾಲಿಟನ್ ಏರಿಯಾ ನೆಟ್‌ವರ್ಕ್
B) ಲೋಕಲ್ ಏರಿಯಾ ನೆಟ್‌ವರ್ಕ್
C) ವೈಡ್ ಏರಿಯಾ ನೆಟ್‌ವರ್ಕ್
D) ಪರ್ಸನಲ್ ಏರಿಯಾ ನೆಟ್‌ವರ್ಕ್

38. ವರ್ಲ್ಡ್ ವೈಡ್ ವೆಬ್‌ನ ಸಂಶೋಧಕ
A) ಟಿಮ್ ಬರ್ನರ್ಸ್‌ಲೀ
B) ಚಾರ್ಲ್ಸ್ ಬ್ಯಾಬೇಜ್
C) ಸ್ಟೀವ್ ಜಾಬ್ಸ್
D) ಜೇಮ್ಸ್‌ಗಾಸ್ಲಿಂಗ್

39. ಕೆಳಗಿನವುಗಳಲ್ಲಿ ಯಾವುದು ಆಫೀಸ್ ಪ್ಯಾಕೇಜ್‌ನ ಭಾಗವಾಗಿ ಬರುವ ಒಂದು ಡೇಟಾಬೇಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಆಗಿರುತ್ತದೆ ?
A) MySQL
B) ಮೈಕ್ರೋಸಾಫ್ಟ್ SQL ಸರ್ವರ್
C) ಒರೇಕಲ್
D) ಮೈಕ್ರೋಸಾಫ್ಟ್ ಎಕ್ಸೆಸ್

40. ಮಾಹಿತಿ ತಂತ್ರಜ್ಞಾನ ಕಾಯಿದೆಯ ಯಾವ ಸೆಕ್ಷನ್ ಅಡಿಯಲ್ಲಿ ಇನ್ನೋರ್ವ ವ್ಯಕ್ತಿಯ ಖಾಸಗಿತನದ ಅತಿಕ್ರಮಣವು ಬರುತ್ತದೆ ?
A) ಸೆಕ್ಷನ್ 66B
B) ಸೆಕ್ಷನ್ 66E
C) ಸೆಕ್ಷನ್ 66
D) ಸೆಕ್ಷನ್ 67

41. ಕುಮಾರನಾಶನ್ ಬಗೆಗಿನ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?
   1. ಮಹಾಕಾವ್ಯ ರಚಿಸಲಿಲ್ಲ.
   2. ಪ್ರರೋದನಮ್ ಕುಮಾರನಾಶನನ ಕೃತಿಯಲ್ಲ.
   3. ಮಗ್ದಲನ್ ಮರಿಯಮ್ ಎಂಬ ಕವಿತೆಯನ್ನು ಬರೆದರು.
   4. ವೀಣಾ ಪೂವು ಪ್ರಥಮ ಕವಿತೆಯಾಗಿದೆ.

   A) 1 ಮಾತ್ರ B) 1 ಮತ್ತು 4 C) 2 D) 3 ಮತ್ತು 4

42. ಮಲಯಾಳಂನ ಪ್ರಥಮ ಸಣ್ಣ ಕತೆ ಯಾವುದು ?
   1. ವೆಳ್ಳಪೊಕ್ಕತ್ತಿಲ್
   2. ಶಬ್ದಿಕುನ್ನ ಕಾಳಪ್ಪ
   3. ವಾಸನಾ ವಿಕೃತಿ
   4. ಪ್ರಕಾಶಂ ಪರತುನ್ನ ಪೆಣ್‌ಕುಟ್ಟಿ

   A) 2 B) 4 C) 3 D) 1

43. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಕಥಕ್ಕಳಿಗೆ ಸಂಬಂಧಿಸಿಲ್ಲ?
   1. ಕಥಕ್ಕಳಿಯಲ್ಲಿ ಮಿಣುಕ್ಕು, ಪಚ್ಚ, ಕತ್ತಿ, ಕರಿ, ತಾಡಿ ಇವುಗಳು ಪ್ರಥಮ ಪಾತ್ರಗಳು.
   2. ಚೆಂಡ, ಸುಧಾ ಮದ್ದಳಂ, ಚೆಂಗಿಲ, ಇಳತಾಳಮ್ ಇವು ಕಥಕ್ಕಳಿಯಲ್ಲಿ ಬಳಸಲ್ಪಡುವ ಸಂಗೀತೋಪಕರಣಗಳು.
   3. ಕಥಕ್ಕಳಿಯ ಸಾಹಿತ್ಯರೂಪವು ಆಟಕಥಾವನ್ನು ಆಧರಿಸಿದೆ.
   4. ನಾಟಕ ಎಂಬುದು ಸಂಭಾಷಣೆಗೆ ಪ್ರಾಮುಖ್ಯ ನೀಡುವ ಒಂದು ಸಾಹಿತ್ಯಕ ರೂಪವಾಗಿದೆ.

   A) 4 B) 3 ಮತ್ತು 4 C) 1 ಮತ್ತು 2 D) 3

44. ಒಲಿಂಪಿಕ್ ಲಾಂಛನದಲ್ಲಿ ಎಷ್ಟು ರಿಂಗ್‌ಗಳಿವೆ ?
   1. 6
   2. 8
   3. 5
   4. 4

   A) 4 B) 5 C) 6 D) 8

45. ಕೇರಳ ಜಾನಪದ ಅಕಾಡೆಮಿಯ ಕೇಂದ್ರಸ್ಥಾನ ಎಲ್ಲಿದೆ ?
   1. ತಿರುವನಂತಪುರಂ
   2. ತ್ರಿಶ್ಶೂರ್
   3. ಕಣ್ಣೂರ್
   4. ಕೊಚ್ಚಿ

   A) 2 B) 1 C) 4 D) 3

46. ಶ್ರೀ ನಾರಾಯಣ ಗುರು ಮುಕ್ತ ವಿಶ್ವವಿದ್ಯಾನಿಲಯದ ಪ್ರಥಮ ವೈಸ್ ಚಾನ್ಸೆಲರ್ ಯಾರಾಗಿದ್ದರು ?
1. ಸುಕುಮಾರ್ ಅಳಿಕೋಡ್
2. ಡಾ. ಪಿ. ಎಂ. ಮುಬಾರಕ್ ಪಾಷಾ
3. ಕೆ. ಜಯಕುಮಾರ್
4. ಅನಿಲ್ ವಳ್ಳತೋಳ್
A) 3 B) 2 C) 1 D) 4

47. "ಥಾಮಸ್ ಕಪ್"ನೊಂದಿಗೆ ಸಂಯೋಗ ಹೊಂದಿರುವ ಕ್ರೀಡೆ ಯಾವುದು ?
1. ಬ್ಯಾಡ್‌ಮಿಂಟನ್
2. ಟೆನ್ನಿಸ್
3. ಫುಟ್‌ಬಾಲ್
4. ಕ್ರಿಕೆಟ್
A) 1 B) 3 C) 4 D) 2

48. 'ಫ್ಲೈಯಿಂಗ್ ಸಿಖ್' ಎಂದು ಪರಿಚಿತರಾಗಿದ್ದ ಒಲಿಂಪಿಕ್ ಕ್ರೀಡಾಳು ಮಿಲ್ಖಾಸಿಂಗ್ ಯಾವ ವರ್ಷ ನಿಧನ ಹೊಂದಿದರು ?
1. 2018
2. 2020
3. 2021
4. 2019
A) 4 B) 2 C) 3 D) 1

49. ಜೋಬೈಡನ್ ಅಮೇರಿಕದ ____________ ರಾಷ್ಟ್ರಾಧ್ಯಕ್ಷರು.
1. 40ನೆಯ
2. 46ನೆಯ
3. 45ನೆಯ
4. 43ನೆಯ
A) 2 B) 3 C) 4 D) 1

50. 2021ರ ಎಳುತಚ್ಚನ್ ಅವಾರ್ಡ್‌ನ್ನು ಯಾರು ಗೆದ್ದರು ?
1. ಪಿ. ವಲ್ಸಲಾ
2. ಎಂ. ಮುಕುಂದನ್
3. ಸಿ. ರಾಧಾಕೃಷ್ಣನ್
4. ಪಿ. ಸಚ್ಚಿದಾನಂದನ್
A) 4 B) 1 C) 3 D) 2

51. + ಅಂದರೆ ×, – ಅಂದರೆ +, × ಅಂದರೆ ÷, ಹೀಗಾದಲ್ಲಿ 5 + 4 – 18 × 3

A) –34 B) 16 C) 26 D) 15

52. 122.992 – ? = 57.76 + 31.1

A) 34.378 B) 38.132 C) 34.123 D) 34.132

53. 10 ಸರಕುಗಳ ಅಸಲು ಬೆಲೆ ಮತ್ತು x ಸರಕುಗಳ ಮಾರಾಟ ಬೆಲೆ ಒಂದೇ ಆಗಿರುತ್ತದೆ. ಲಾಭಾಂಶ 25% ಆದಲ್ಲಿ, xನ ಬೆಲೆ ಎಷ್ಟು ?

A) 8 B) 25 C) 10 D) 15

54. ಗೋಳವೊಂದರ ವ್ಯಾಸವು 6 ಸೆಂ.ಮೀ. ಆದಲ್ಲಿ, ಅದರ ಪರಿಮಾಣ (volume) ಎಷ್ಟು ?

A) 112.14 B) 113.04 C) 113.14 D) 112.04

55. 15, 24, 35, 48, 63, ?

A) 80 B) 76 C) 90 D) 98

56. 40 ಜನರ ವಾರದ ಸರಾಸರಿ ಕೂಲಿ ರೂ. 360/-. ಬೇರೆ 20 ಜನರ ವಾರದ ಸರಾಸರಿ ಕೂಲಿ ರೂ. 360/- ವಾರದ ಕೂಲಿ ರೂ. 420/- ಹಾಗಾದರೆ ಒಟ್ಟು ಸರಾಸರಿ ಎಷ್ಟು ?

A) 380 B) 360 C) 400 D) 370

57. ತಾಯಿಯೋರ್ವಳು ಮಗಳಿಗಿಂತ 5 ಪಟ್ಟು ಹಿರಿಯವಳು. 4 ವರ್ಷಗಳ ನಂತರ ಅವರಿಬ್ಬರ ಒಟ್ಟು ವಯಸ್ಸು 44 ಎಂದಾದಲ್ಲಿ, ಮಗಳ ಈಗಿನ ವಯಸ್ಸು ಎಷ್ಟು ?

A) 6 B) 5 C) 7 D) 8

58. ವ್ಯಕ್ತಿಯೋರ್ವನು ತನ್ನ ಆಸ್ತಿಯನ್ನು ಮಗಳು, ಮಗ ಮತ್ತು ದಾನವಾಗಿ (charity) ನೀಡುತ್ತಾನೆ. ಹಾಗಾದರೆ, ಆತ ತನ್ನ ಆಸ್ತಿಯಲ್ಲಿ ಎಷ್ಟನ್ನು ಹಂಚಿದ ?

A) 1/10 B) 1/20 C) 19/20 D) 9/10

59. ಎರಡು ಸಂಖ್ಯೆಗಳ ಅನುಪಾತವು 5 : 8 ಆಗಿರುತ್ತದೆ. ಅವುಗಳ ವ್ಯತ್ಯಾಸವು 48 ಆದಲ್ಲಿ, ಸಣ್ಣ ಸಂಖ್ಯೆ ಎಷ್ಟು ?

A) 96 B) 80 C) 128 D) 64

60. ಮೊತ್ತವೊಂದು ಚಕ್ರಬಡ್ಡಿ (Compound interest) ದರದಲ್ಲಿ 8 ವರ್ಷಗಳಲ್ಲಿ ದ್ವಿಗುಣಗೊಳ್ಳುತ್ತದೆ. ಎಷ್ಟು ಸಮಯದಲ್ಲಿ ಇದು 8 ಪಟ್ಟಾಗುತ್ತದೆ ?

A) 24 B) 12 C) 16 D) 32

61. FRIEND ಎಂಬುದು HUMJTK ಎಂದು ಕೋಡ್ ಮಾಡಿದರೆ, ಆ ಕೋಡ್‌ನಲ್ಲಿ CANDLE ಹೇಗೆ ಬರೆಯಲಾಗುತ್ತದೆ ?

A) EDRIRL B) DCQHQK C) ESJFME D) DEQJQM

62. ಗುಂಪಿಗೆ ಸೇರದೆ ಇರುವುದನ್ನು ಕಂಡುಹಿಡಿಯಿರಿ.

A) 7314 B) 7029 C) 2709 D) 3115

63. ಸೇನೆ : ಆದೇಶ : : ಪ್ರೀತಿ :

A) ನಾಟಕ B) ಚಲನಚಿತ್ರ C) ಆರಕ್ಷಕ D) ಕುಟುಂಬ

64. 6 : 18 : : 4 :

A) 14 B) 16 C) 8 D) 6

65. ಮಹಿಳೆಯೊಬ್ಬಳು ಫೋಟೋ ಒಂದರಲ್ಲಿ ಒರ್ವ ಪುರುಷನನ್ನು ತೋರಿಸುತ್ತಾ ಹೀಗೆಂದಳು "ಆತನ ಸಹೋದರನ ತಂದೆಯು ನನ್ನ ಅಜ್ಜನ ಏಕೈಕ ಪುತ್ರ" ಫೋಟೋದಲ್ಲಿರುವ ಪುರುಷನೊಂದಿಗೆ ಈ ಮಹಿಳೆಯದ್ದು ಯಾವ ಸಂಬಂಧ ?

A) ತಾಯಿ B) ಸೋದರತ್ತೆ (ಆಂಟಿ)

C) ಮಗಳು D) ಸಹೋದರಿ

66. 4, 4, 8, 12, 20, ?, 52

A) 22 B) 24 C) 28 D) 32

67. ರಾಮನ್ ಉತ್ತರಕ್ಕೆ 40 ಕಿ.ಮೀ. ಪ್ರಯಾಣಿಸುತ್ತಾನೆ ಮತ್ತು ನಂತರ 50 ಕಿ.ಮೀ. ಬಲಕ್ಕೆ ಪ್ರಯಾಣಿಸುತ್ತಾನೆ. ಆತ ಮತ್ತೆ ಬಲಕ್ಕೆ 30 ಕಿ.ಮೀ. ಪ್ರಯಾಣಿಸುತ್ತಾನೆ ಹಾಗೂ ನಂತರ ಮತ್ತೊಮ್ಮೆ 50 ಕಿ.ಮೀ. ಬಲಕ್ಕೆ ಪ್ರಯಾಣಿಸುತ್ತಾನೆ. ಹೀಗಾದಲ್ಲಿ ರಾಮನ್ ಹೊರಟಲ್ಲಿಂದ ಎಷ್ಟು ದೂರದಲ್ಲಿದ್ದಾನೆ ?

A) 10 B) 20 C) 30 D) 40

68. ಒಂದು ವೇಳೆ 5 ಔನ್ಸ್‌ಗಳು 140 ಗ್ರಾಂಗಳಿಗೆ ಸಮವಾದಲ್ಲಿ, 3 ಪೌಂಡ್ ಮೀನು ಎಷ್ಟು ಗ್ರಾಂಗಳಿಗೆ ಸಮವಾಗಿವೆ ?

A) 1340 B) 1344 C) 1244 D) 1240

69. ಗಡಿಯಾರವೊಂದರಲ್ಲಿ 4 : 30 ಘಂಟೆ ಆದಾಗ, ದೊಡ್ಡ ಮುಳ್ಳು ಪೂರ್ವದ ಕಡೆಗೆ ಇದ್ದಲ್ಲಿ, ಸಣ್ಣ ಮುಳ್ಳು ಯಾವ ದಿಕ್ಕಿನತ್ತ ಇರುತ್ತದೆ ?

A) ವಾಯುವ್ಯ B) ಆಗ್ನೇಯ

C) ಈಶಾನ್ಯ D) ನೈಋತ್ಯ

70. ನಾಳೆಗೆ 3 ದಿನ ಮೊದಲು ಶುಕ್ರವಾರವೆಂದಾದರೆ, ನಿನ್ನೆಗೆ 3 ದಿನ ಮೊದಲು ಯಾವ ದಿನ ?

A) ಶುಕ್ರವಾರ B) ಸೋಮವಾರ

C) ಮಂಗಳವಾರ D) ಗುರುವಾರ

71. Sumathi's parents _________ visited Taj Mahal.
A) have B) has C) is D) was

72. Helen of Troy was considered as the ________ beautiful woman in the World.
A) more B) very C) most D) nice

73. I saw a man. _______ man was standing infront of a gate.
A) The B) An C) A D) One

74. Renju wrote a letter to you, ________ ?
A) is it B) don't he C) will you D) didn't he

75. Senior Officers reached the accident spot to _______ the rescue operations.
A) supervising B) supervise
C) supervises D) supervised

76. Sheeba _________ the newspaper when her husband returned from office.
A) is reading B) was reading
C) reads D) have been reading

77. If you had enough money, you ________ a car.
A) could buy B) could have bought
C) can buy D) buy

78. Light can pass ________ glass.
A) on B) besides
C) through D) along

79. The class teacher asked the student _______ he was late.
A) what B) why C) that D) which

80. A book is _________ to Smitha by her uncle.
A) present B) presenting
C) presentation D) presented

81. Smitha has got a _________ ache.

A) tooth B) teeth C) teeth's D) tooth's

82. _________ driving may cause accidents.

A) drinking B) careless C) careful D) caring

83. The synonym of the word "Shiver".

A) feel B) learn C) tremble D) shy

84. Find out a compound word.

A) laptop B) books C) warden D) gardening

85. The antonym of the word 'crowded' is

A) deserted B) busy C) calm D) warm

86. Leena _________ new ideas about new year celebration.

A) put off B) set out C) put forward D) turn off

87. Roma stands ________ the bed of her mother.

A) besides B) beside C) bed side D) sides

88. The meaning of the idiom 'Dutch Courage'.

A) Courage of Dutch people

B) Brave

C) Heroism of fools

D) False courage acquired by drinking liquor

89. A person who believes that the worst will happen.

A) Pessimist B) Optimist C) Atheist D) Villain

90. The Malayalam equivalent of the proverb "If there is a will, there is a way".

A) ಕಾಲ ಕಿಡಕ್ಕುಮ್ ಕಯರೋಡುಂ

B) ತಲ್ಲ ಚವಿಟಿಯಾಲ್ ಪಿಲ್ಳ್ಯಕ್ ಕೇಡಿಲ್ಲ

C) ವೇನಮೆಂಕಿಲ್ ಚಕ್ಕ ವೇರಿಲುಂ ಕಾಯಿಕುಂ

D) ಕಾಕ ಕುಳಿಚಾಲ್ ಕೊಕ್ಕಾಗುಮೊ

ಸರಿಯಾದ ಉತ್ತರವನ್ನು ಆರಿಸಿರಿ.

91. ಕೆಳಗಿನವುಗಳಲ್ಲಿ ಸರಿಯಾದ ಪದ ಯಾವುದು ?

A) ಬೇಧಭಾವ

B) ಭೇದಬಾವ

C) ಭೇದಭಾವ

D) ಇವುಗಳಲ್ಲಿ ಯಾವುದು ಅಲ್ಲ

92. 'ಭೂಮಿ' ಈ ಪದದ ಪರ್ಯಾಯ ಪದ ಯಾವುದು ?

A) ಪೃಥ್ವಿ

B) ರವಿ

C) ಶಶಿ

D) ಅನಲ

93. ಕೆಳಗಿನವುಗಳಲ್ಲಿ ಸರಿಯಾದ ವಾಕ್ಯ ಯಾವುದು ?

A) ಹಕ್ಕಿ ಮರದ ಕೊಂಬೆಯಿಂದ ಹಾರಿದವು.

B) ಹಕ್ಕಿಗಳು ಮರದ ಕೊಂಬೆಯಿಂದ ಹಾರಿತು.

C) ಹಕ್ಕಿಗಳು ಮರದ ಕೊಂಬೆಯಿಂದ ಹಾರಿದವು.

D) ಹಕ್ಕಿಗಳು ಮರದ ಕೊಂಬೆಯಲ್ಲಿ ಹಾರಿತು.

94. ಸಂತೋಷದಿಂದ ಬರುವ ಕಣ್ಣೀರು – ಈ ಅರ್ಥ ಕೊಡುವ ಪದ ಯಾವುದು ?

A) ಆನಂದಭಾಷ್ಪ

B) ಆದರಾಂಜಲಿ

C) ಕಂಬನಿ

D) ಭಾಷ್ಪಾಂಜಲಿ

95. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

A) ನೇಸರ

B) ಭಾಸ್ಕರ

C) ಆದಿತ್ಯ

D) ಚಂದ್ರ

96. 'ಜ್ಞಾನ' ಇದರ ವಿರೋಧಾರ್ಥ ಪದ ಯಾವುದು ?

A) ವಿಜ್ಞಾನ
B) ಅಜ್ಞಾನ
C) ಸುಜ್ಞಾನ
D) ಪರಿಜ್ಞಾನ

97. ಕೈಕೆಸರಾದರೆ ಬಾಯಿ ಮೊಸರು – ಈ ಗಾದೆಮಾತಿನ ಸೂಚ್ಯಾರ್ಥವೇನು ?

A) ಕೈಯಲ್ಲಿ ಕೆಸರು ಮೆತ್ತಿಕೊಂಡರೆ ಬಾಯಿಯಲ್ಲಿ ಮೊಸರಾಗುವುದು
B) ಕಷ್ಟಪಟ್ಟು ದುಡಿದರೆ ಸುಖವಾಗಿ ಜೀವಿಸಬಹುದು
C) ತಪ್ಪು ಮಾಡಿದವನು ಶಿಕ್ಷೆ ಅನುಭವಿಸುವನು
D) ಅತಿಯಾಸೆ ಮಾಡಿದರೆ ತೊಂದರೆ ತಪ್ಪಿದ್ದಲ್ಲ

98. 'ಕಂಪು' ಈ ಪದದ ಅರ್ಥವೇನು ?

A) ಕೆಸರು
B) ಕಮಲ
C) ವಸ್ತ್ರ
D) ಪರಿಮಳ

99. 'ವಿದ್ಯಾಲಯ' ಈ ಪದದ ಸರಿಯಾದ ವಿಂಗಡಣೆ ಯಾವುದು ?

A) ವಿದ್ಯಾ + ಆಲಯ
B) ವಿದ್ಯಾ + ಲಯ
C) ವಿದ್ಯ + ಲಾಯ
D) ವಿದ್ಯ + ಲಯ

100. ಕೆಳಗಿನವುಗಳಲ್ಲಿ ಸರಿಯಾದ ವಾಕ್ಯವನ್ನು ಗುರುತಿಸಿರಿ.

A) ಶ್ರೀದೇವಿಯು ಗೆಳತಿಯರೊಂದಿಗೆ ಆಟವಾಡಲು ಹೋದನು.
B) ಶ್ರೀದೇವಿಯು ಗೆಳತಿಯರನ್ನು ಆಟವಾಡಲು ಹೋದಳು.
C) ಶ್ರೀದೇವಿಯು ಗೆಳತಿಯರೊಂದಿಗೆ ಆಟವಾಡಲು ಹೋದಳು.
D) ಶ್ರೀದೇವಿಯು ಗೆಳತಿಯರೊಂದಿಗೆ ಆಟವಾಡಲು ಹೋಯಿತು.

---